ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಕರಾಸ:ಕೇಕ:ಆಡಳಿತ:ಸೇನಿ:283:/ 307 /15-16 ದಿನಾಂಕ: 23-03-2016 24

**ಸುತ್ತೋಲೆ ಸಂಖ್ಯೆ: 1585**

**ವಿಷಯ:** ಕರಾರಸಾ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರ ದರ್ಜೆ-2 ಅಧಿಕಾರಿ ಮತ್ತು ದರ್ಜೆ-3 ರ ಹುದ್ದೆಗಳ ನೇಮಕಾತಿಗಾಗಿ ನಡೆಸುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಠ ಅಂಕ ನಿಗದಿಪಡಿಸುವ ಸಂಬಂಧ ನಿಯಮಾವಳಿ 6, 7 ಮತ್ತು 8 ಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: 1) ಠರಾವು ಸಂಖ್ಯೆ:9758 ದಿನಾಂಕ: 27-01-2016.

2) ಸಂ:ಸಾರಿಇ:15 ಸಾಸಂಸೇ:2016 ದಿನಾಂಕ: 03-03-2016.

- - - -

ದಿನಾಂಕ 27-01-2016 ರಂದು ನಡೆದ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಳಿಯು ಠರಾವು ಸಂಖ್ಯೆ: 9758, ದಿನಾಂಕ: 27-01-2016 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರ ಎಲ್ಲಾ ದರ್ಜೆ-2 ರ ಅಧಿಕಾರಿ ಹಾಗೂ ಎಲ್ಲಾ ದರ್ಜೆ-3 ರ (ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆ ಹೊರತುಪಡಿಸಿ) ಹುದ್ದೆಗಳಿಗೆ ನಡೆಸುವ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕನಿಷ್ಠ ಶೇಕಡ 30 ಅಂಕಗಳನ್ನು ನಿಗದಿಪಡಿಸುವ ಸಂಬಂಧ ನಿಯಮಾವಳಿ 6. 7 ಮತ್ತು 8ಕ್ಕೆ ತಿದ್ದುಪಡಿಗೆ ತೆಗೆದುಕೊಂಡ ನಿರ್ಣಯವನ್ನು ಉಲ್ಲೇಖ-2 ರಲ್ಲಿ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ.

ಸರ್ಕಾರದ ಅನುಮೋದನಾ ಪತ್ರದ ಹಾಗೂ ಅಧಿಸೂಚನೆಯ ಪ್ರತಿಗಳನ್ನು ಸುತ್ತೋಲೆಗೆ ಲಗತ್ತಿಸಲಾಗಿದೆ. ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

ಅಡಕ: ಮೇಲಿನಂತೆ.

(ರಾಜೇಂದರ್ ಕುಮಾರ ಕಟಾರಿಯಾ)
ವ್ಯವಸ್ಥಾಪಕ ನಿರ್ದೇಶಕರು

<u>ಪ್ರತಿ ಮಾಹಿತಿಗಾಗಿ:</u>

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

<u>ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.